MVC No.294/2024
RW-01

ದಿನಾಂಕಃ 08-06-2026.
ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ 1 ನೇ ಎದುರುದಾರರ ಪರ ಮಾನ್ಯ ಶ್ರೀ SSK ವಕೀಲರಿಂದ ಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ವಾಹನ ನಂಬರ KA-28-A-7510 ರ ಮೂಲ ಆರ್.ಸಿ. ಯನ್ನು ನಿ.ಆರ್.1 ಎಂದು, ಸಾಕ್ಷಿಯ ಮೂಲ DL ನ್ನು ನಿ.ಆರ್.2, ಸದರಿ ವಾಹನದ ವಿಮಾ ಪಾಲಿಸಿಯ ಪ್ರತಿಯನ್ನು ನಿ.ಆರ್.3 ಎಂದು ಗುರುತಿಸಲಾದವು. ಪ್ರಸ್ತುತ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ ಅರ್ಜಿದಾರರ ಪರ ಶ್ರೀಮತಿ PNJ ಮಾನ್ಯ ವಕೀಲರಿಂದ :**

3. ಸದರಿ ಅಪಘಾತವಾದ ಸಂದರ್ಭದಲ್ಲಿ ಸದರಿ ವಾಹನದ ವಿಮೆ ಹಾಗೂ ಸದರಿ ವಾಹನ ಚಾಲಕನ DL ಚಾಲ್ತಿಯಲ್ಲಿವು ಎಂದರೆ ಸರಿ. ಸದರಿ ವಾಹನದ fitness ಕೂಡಾ ಸರಿಯಾಗಿತ್ತು ಎಂದರೆ ಸರಿ. ಸದರಿ ಅಪಘಾತವಾದ ಸಂದರ್ಭದಲ್ಲಿ ಮೃತ ಹನಮಂತ ಇವರ ವಯಸ್ಸು 60 ಆಗಿತ್ತು ಎಂದರೆ ಸರಿ. ಸದರಿ ಮೃತರು ಕುರಿಗಾಹಿ ಆಗಿದ್ದರು ಎಂದರೆ ಸರಿ. ಸದರಿ ಕುರಿಕಾಯುತ್ತಿದ್ದರಿಂದ ಮೃತ ಹನಮಂತ ಇವರು ಪ್ರತಿ ತಿಂಗಳು ರೂ.25,000/- ಆದಾಯ ಹೊಂದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಅಗಿರುತ್ತದೆ ಎಂದು ಹೇಳಿ ಪೊಲೀಸರು ನನ್ನ ಮೇಲೆ ಅಂತಿಮ

ವರದಿಯನ್ನು ಸಲ್ಲಿಸಿರುತ್ತಾರೆ ಆದರೆ ನಾನು ಸದರಿ ಅಪಘಾತವನ್ನು ಮಾಡಿರುವುದಿಲ್ಲ. ನಿಪಿ.3 ನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲಿರುವ ವಿಚಾರಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

**ಪಾಟಿ ಸವಾಲು 2 ನೇ ಎದುರುದಾರರ ಪರ ಶ್ರೀ RND ಮಾನ್ಯ ವಕೀಲರಿಂದಃ**

4. ಸದರಿ ಅಪಘಾತವು ಸದರಿ ಮೋಟಾರ ಸೈಕಲ ಸವಾರನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ. ನನ್ನ ಹತ್ತಿರ ಎರಡು ಲಾರಿಗಳು ಇರುತ್ತವೆ. ನನ್ನ ಬಳಿ ಇಬ್ಬರು ಚಾಲಕರು ಕೆಲಸ ಮಾಡುತ್ತಾರೆ. ದಿಃ 02-06-2024 ರಂದು ಸದರಿ ಲಾರಿಯ ಚಾಲಕ ಎಂದು ನಾನೇ ಹೋಗಿರುತ್ತೇನೆ. HMV ಗೆ ಕೇವಲ ಮೂರು ವರ್ಷ ಪರವಾನಿಗೆ ಕೊಡುತ್ತಾರೆ ಎಂದರೆ ಸಾಕ್ಷಿ ಐದು ವರ್ಷ ಎಂದು ಹೇಳುತ್ತಾರೆ. ನಿ.ಆರ್.2 ರಲ್ಲಿ BG ಎಂದು ದಿಃ 14-09-2030 TR ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ದಿಃ 02-06-2024 ರಂದು ನಾನು DL ನ್ನು ಹೊಂದಿರುತ್ತೇನೆ ಎಂದು ದಾಖಲೆಯನ್ನು ಸಲ್ಲಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಆರ್.2 ರಲ್ಲಿ ದಿಃ 02-06-2024 ಕ್ಕೆ ಅದು valid ಆಗಿರುತ್ತದೆ ಎಂದು ನಮೂದು ಮಾಡಿರುವುದು ಸರಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ವಿಮೆ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದರಿಂದ ಅರ್ಜಿದಾರರಿಗೆ ಪರಿಹಾರದ ಹಣವನ್ನು ಕೂಡುವ ಭಾದ್ಯತೆಯನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ